RNU AIR DHARWAD

# OCTOBER 20, 2025

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ರಾಜ್ಯಾದ್ಯಂತ ಸುರಿದ, ಭಾರೀ ಮಳೆ ಹಾಗೂ ನೆರೆ ಹಾವಳಿಯಿಂದ, 14 ಲಕ್ಷ ಹೆಕ್ಟರ್ ಪ್ರದೇಶದ, ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ, ಹಾನಿಯಾಗಿದೆ ಎಂದು, ಕೃಷಿ ಖಾತೆ ಸಚಿವ, ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಮಂಡ್ಯದಲ್ಲಿ ಮಾತನಾಡಿದ ಸಚಿವರು, ರಾಷ್ಟ್ರೀಯ ವಿಕೋಪ ಪರಿಹಾರ ನಿಧಿ ಜೊತೆ, ರಾಜ್ಯ ಸರ್ಕಾರ, ಹೆಚ್ಚುವರಿಯಾಗಿ, ಎಂಟೂವರೆ ಸಾವಿರ ಕೋಟಿ ರೂಪಾಯಿ ಪರಿಹಾರವನ್ನು ನಿಗದಿ ಪಡಿಸಿದೆ. ಹಾನಿಯ ಸಮೀಕ್ಷೆ ಪೂರ್ಣಗೊಂಡ ಬಳಿಕ, ಸಮಗ್ರ ಚಿತ್ರಣ ದೊರೆಯಲಿದೆ ಎಂದರು.ಧಾರವಾಡ ಜಿಲ್ಲೆಯ, ಅತಿ ವೃಷ್ಟಿ ಹಾನಿಯ ಸಮೀಕ್ಷಾ ಕಾರ್ಯ ಪೂರ್ಣಗೊಂಡು, ವರದಿ ಆಧರಿಸಿ, ಪರಿಹಾರ ಹಂಚಿಕೆ ಆರಂಭವಾಗಿದೆ. ಉತ್ತರ ಕರ್ನಾಟಕದ, ಬಾಕಿ 14 ಜಿಲ್ಲೆಗಳ ವರದಿ, ಸದ್ಯದಲ್ಲೇ ಸಲ್ಲಿಕೆಯಾಗಲಿದೆ ಎಂದು ಸಚಿವ ಚಲುವರಾಯಸ್ವಾಮಿ ಹೇಳಿದರು.

<><><>

ಅಯೋಧ್ಯೆಯಲ್ಲಿ, ದೀಪಾವಳಿ ಹಿನ್ನೆಲೆ, ವಾರ್ಷಿಕ ದೀಪೋತ್ಸವದ, ಒಂಬತ್ತನೇ ಆವೃತ್ತಿ ನಿನ್ನೆ ರಾತ್ರಿ ಗಮನ ಸೆಳೆಯಿತು. ಅಯೋಧ್ಯೆ ನಗರಾದ್ಯಂತ, 26 ಲಕ್ಷಕ್ಕೂ ಹೆಚ್ಚು ದೀಪಗಳನ್ನು ಬೆಳಗಿಸಲಾಯಿತು. ರಾಮ್ ಕಿ ಪೌಡಿ ಉದ್ದಕ್ಕೂ, 56 ಘಾಟ್‌ಗಳಲ್ಲಿ, ದಾಖಲೆಯ 26 ಲಕ್ಷ 11 ಸಾವಿರ 101 ಮಣ್ಣಿನ ಹಣತೆಗಳು ಬೆಳಗಿದವು. ಪವಿತ್ರ ಸರಯು ನದಿ ದಡದಲ್ಲಿ, ಸರಯು ಅರತಿ ಹಾಗೂ ದೀಪಗಳ ಪ್ರಕಾಶ, ಅಯೋಧ್ಯೆಯ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಭವ್ಯತೆಯನ್ನು ಪ್ರದರ್ಶಿಸಿತು.

<><><>

ನರಕ ಚತುರ್ದಶಿ ಹಾಗೂ ದೀಪಾವಳಿ ಹಬ್ಬದ ಹಿನ್ನೆಲೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಸೇರಿದಂತೆ ಗಣ್ಯರು, ನಾಡಿನ ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ. ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವರಾದ ಪ್ರಲ್ಹಾದ್ ಜೋಶಿ, ತಮ್ಮ ಎಕ್ಸ್ ಖಾತೆ ಮೂಲಕ 'ದುಷ್ಟ ಸಂಹಾರ ಹಾಗೂ ವಿಜಯದ ಪ್ರತೀಕವಾಗಿರುವ ನರಕ ಚತುರ್ದಶಿ ಹಬ್ಬ, ಎಲ್ಲರ ಬಾಳಲ್ಲಿ ಬೆಳಕು ತರಲಿ ಎಂದು ಹಾರೈಸಿದ್ದಾರೆ.

<><><>

ಕ್ರೀಡಾ ಕ್ಷೇತ್ರದ ಡೋಪಿಂಗ್– ಉದ್ದೀಪನ ವಸ್ತು ಸೇವನೆ ವಿರೋಧಿ ಜಾಗೃತಿಗಾಗಿ, ದೈಹಿಕ ಶಿಕ್ಷಣ, ಫಿಟನೆಸ್ ಮತ್ತು ಕ್ರೀಡಾ ಸಂಘದ ಅಂತಾರಾಷ್ಟ್ರೀಯ ಒಕ್ಕೂಟದಿಂದ, 'ರಾಷ್ಟ್ರೀಯ ಶ್ರೇಷ್ಠತಾ ಪ್ರಶಸ್ತಿಗೆ', ಧಾರವಾಡದ ಕ್ರೀಡಾ ವೈದ್ಯ ಡಾಕ್ಟರ ಕಿರಣ್ ಕುಲಕರ್ಣಿ ಭಾಜನರಾಗಿದ್ದಾರೆ. ಹೈದರಾಬಾದ್‌ನಲ್ಲಿ ಜರುಗಿದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಈ ಪ್ರಶಸ್ತಿ ಸ್ವೀಕರಿಸಿದರು. ಅಖಿಲ ಭಾರತೀಯ ಫುಟ್ಬಾಲ್ ಫೆಡರೇಶನ್ ವೈದ್ಯಕೀಯ ಸಮಿತಿ ಅಧ್ಯಕ್ಷರಾಗಿರುವ, ಕಿರಣ್ ಕುಲಕರ್ಣಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದು, ಕ್ರೀಡಾ ಕ್ಷೇತ್ರದಲ್ಲಿ ಉದ್ದೀಪನ ವಸ್ತು ಸೇವನೆ ಜಾಗೃತಿ ಅಗತ್ಯತೆ ಬಗ್ಗೆ ಮಾಹಿತಿ ನೀಡಿದ್ದಾರೆ.

<><><>

ಧ್ವನಿ: ಡಾಕ್ಟರ ಕಿರಣ್ ಕುಲಕರ್ಣಿ 62 ಸೆಕೆಂದುಗಳು

<><><>

ಅಸೋಸಿಯೇಷನ್ ಆಫ್ ಕನ್ನಡ ಕೂಟಾಸ್ ಆಫ್ ಅಮೆರಿಕ – ಅಕ್ಕ ಸಂಸ್ಥೆ ಸಂಸ್ಥಾಪನೆಯ, 25ನೇ ವರ್ಷದ, ಬೆಳ್ಳಿ ಹಬ್ಬದ ಅಂಗವಾಗಿ, ಅಕ್ಕ ಅಧ್ಯಕ್ಷ, ಮಂಡ್ಯದ ಮಧು ರಂಗಯ್ಯ, ಅಕ್ಕ 5 ಎ ವಾಕಥಾನ್ ಆಯೋಜಿಸಿದ್ದರು. ಮಂಡ್ಯದ, ಸರ್ ಎಂ. ವಿಶ್ವೇಶ್ವರಾಯ ಕ್ರೀಡಾಂಗಣದಲ್ಲಿ, 'ನಮ್ಮ ಊರು, ನಮ್ಮ ದಾರಿ' ಧ್ಯೇಯದೊಂದಿಗೆ ಆಯೋಜಿಸಿದ್ದ, ವಾಕಥಾನ್‌ಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಚಾಲನೆ ನೀಡಿದರು.
ಕನ್ನಡದ ಕಂಪನ್ನು, ಅಮೆರಿಕದಲ್ಲಿ ಹರಡುತ್ತಿರುವ, 'ಅಕ್ಕ' ಸಂಸ್ಥೆಗೆ, ರಾಜ್ಯ ಸರ್ಕಾರ ಹಾಗೂ ಆದಿಚುಂಚನಗಿರಿಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಬೆಂಬಲವಿದೆ ಎಂದು, ಕೃಷಿ ಖಾತೆ ಸಚಿವರು, ನುಡಿದರು.

<><><>

ಬೆಂಗಳೂರಿನ ಸೌಂದರ್ಯೀಕರಣದ ಜೊತೆಗೆ, ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಎಲ್ಲ 'ಬಿ' ಖಾತೆಗಳನ್ನು, 'ಎ' ಖಾತೆಗಳನ್ನಾಗಿ ಪರಿವರ್ತಿಸಲು, ಮಾರುಕಟ್ಟೆ ದರದ, ಶೇಕಡ 5 ರಷ್ಟು ಶುಲ್ಕ ವಿಧಿಸಲಾಗುತ್ತಿದ್ದು, ವಿನಾಯಿತಿ ನೀಡಲು ಸಾಧ್ಯವಿಲ್ಲ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. 'ಬೆಂಗಳೂರು ನಡಿಗೆ' ಅಭಿಯಾನದಡಿ, ಕೋರಮಂಗಲದ ವೀರಯೋಧ ಉದ್ಯಾನದಲ್ಲಿ ನಾಗರಿಕರೊಂದಿಗೆ ಅವರು ಸಂವಾದ ನಡೆಸಿದರು. ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರಗಳ ಪ್ರಮುಖರೊಂದಿಗೆ, ಶೀಘ್ರ ಸಭೆ ನಡೆಯಲಿದೆ. ಅವರ ಸಮಸ್ಯೆಗಳನ್ನು ನೇರವಾಗಿ ಪರಿಹರಿಸಲಾಗುವುದು. ಯಾವುದೇ ತೊಂದರೆ ಇದ್ದರೂ, ಸಹಾಯವಾಣಿ 1–5–3–3ಕ್ಕೆ ಕರೆ ಮಾಡಿ, ಬಗೆಹರಿಸಿಕೊಳ್ಳಬಹುದು ಎಂದು, ಡಿ.ಕೆ. ಶಿವಕುಮಾರ ಹೇಳಿದರು.

<><><>

ಪೊಲೀಸ್ ಹುತಾತ್ಮರ ದಿನಾಚರಣೆಯು, ನಾಳೆ ಬೆಳಗ್ಗೆ 8 ಗಂಟೆಗೆ, ಕಾರವಾರದ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್. ತಿಳಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>